## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಶೈಕ್ಷಣಿಕ ಅಭಿವೃದ್ಧಿಗಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧೀನದಲ್ಲಿ ಶಿಕ್ಷಣ ತಜ್ಞರ ಸಮಿತಿಯನ್ನು ರಚಿಸುವ ಬಗ್ಗೆ.

**ಓದಲಾಗಿದೆ:**
1. ಅಧ್ಯಕ್ಷರು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ ರವರ ಮನವಿ ಪತ್ರ ಸಂಖ್ಯೆ:7559 ದಿನಾಂಕ:16.12.2024
2. ಯೋಜನಾ ಇಲಾಖೆಯ ಕಡತ ಸಂಖ್ಯೆ:ಪಿಡಿಎಸ್ 168 ಹೆಚ್ ಕೆಡಿ 2024ರ ಕಂಡಿಕೆ:5,7,9,11 ರಲ್ಲಿನ ಮಾನ್ಯ ಯೋಜನಾ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆ.

*******

**<u>ಪ್ರಸ್ತಾವನೆ</u>**

ಮೇಲೆ ಓದಲಾದ (1)ರಲ್ಲಿ ಡಾ. ಅಜಯ್ ಧರ್ಮಸಿಂಗ್, ಅಧ್ಯಕ್ಷರು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ಹಾಗೂ ಮಾನ್ಯ ಶಾಸಕರು ಜೇವರ್ಗಿ ವಿಧಾನಸಭಾ ಕ್ಷೇತ್ರ ಇವರು ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಶೈಕ್ಷಣಿಕ ಅಭಿವೃದ್ಧಿಗಾಗಿ <u>ಈ ಕೆಳಕಂಡ ಶಿಕ್ಷಣ ತಜ್ಞರ ಪಟ್ಟಿಯಂತೆ</u> ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧೀನದಲ್ಲಿ ಶಿಕ್ಷಣ ತಜ್ಞರ ಸಮಿತಿಯನ್ನು ರಚಿಸುವ ಕುರಿತು ಸರ್ಕಾರದಿಂದ ಆದೇಶ ಹೊರಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ.

| ಕ್ರ.ಸಂ | ತಜ್ಞರ ಹೆಸರು | ವಿಳಾಸ |
|---|---|---|
| 1) | ಡಾ. ಛಾಯಾದೇಗಾಂವಕರ | ಬೆಂಗಳೂರು |
| 2) | ಡಾ. ಬಸವಲಿಂಗಪಟ್ಟದೇವರು | ಭಾಲ್ಕಿ [ಬೀದರ] |
| 3) | ಡಾ. ಅಬ್ದುಲ್ ಕದೀರ್ | ಬೀದರ |
| 4) | ಶ್ರೀ ಫಾಂಸಿಸ್ ಬಾಷ್ಯಮ್ | ಬಳ್ಳಾರಿ |
| 5) | ಶ್ರೀ ರುದ್ರೇಶ ಎಸ್ | ಕಲಬುರಗಿ |
| 6) | ಶ್ರೀ ಎನ್.ಬಿ. ಪಾಟೀಲ್ | ಕಲಬುರಗಿ |
| 7) | ಡಾ. ಹೂವಿನಭಾವಿ. ಬಿ ಎಲ್ | ಕಲಬುರಗಿ |
| 8) | ಶ್ರೀ ಜಯಣ್ಣ | ರಾಯಚೂರು |
| 9) | ಪ್ರೊ. ಶಾಂತಾನಾಯಕ | ವಿಜಯನಗರ |
| 10) | ಡಾ. ಹೆಚ್.ಡಿ ಪ್ರಶಾಂತ | ವಿಜಯನಗರ |
| 11) | ಮಲ್ಲಿಕಾರ್ಜುನ್ | ಬೀದರ್ |

ಮೇಲೆ ಓದಲಾದ(2)ರಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಶೈಕ್ಷಣಿಕ ಅಭಿವೃದ್ಧಿಗಾಗಿ ಈ ಕೆಳಕಂಡ ಶಿಕ್ಷಣ ತಜ್ಞರ ಪಟ್ಟಿಯಂತೆ ಕಲ್ಯಾಣ ಕರ್ನಾಟಕ ಪ್ರದೇಶ

ಅಭಿವೃದ್ಧಿ ಮಂಡಳಿಯ ಅಧೀನದಲ್ಲಿ ಶಿಕ್ಷಣ ತಜ್ಞರ ಸಮಿತಿಯನ್ನು ರಚಿಸಲು ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುತ್ತಾರೆ.

| ಕ್ರ.ಸಂ | ತಜ್ಞರ ಹೆಸರು | ಹುದ್ದೆ |
|---|---|---|
| 1) | ಡಾ. ಛಾಯಾ ದೇಗಾಂವಕರ | ಅಧ್ಯಕ್ಷರು |
| 2) | ಡಾ. ಅಬ್ದುಲ್ ಕದೀರ್ | ಸದಸ್ಯರು |
| 3) | ಶ್ರೀ ಮಲ್ಲಿಕಾರ್ಜುನ್ ಎಂ.ಎಸ್ ಬೀದರ್ | ಸದಸ್ಯರು |
| 4) | ಶ್ರೀ ಫ್ರಾಂಸಿಸ್ ಬಾಷ್ಯಮ್ ,ಬಳ್ಳಾರಿ | ಸದಸ್ಯರು |
| 5) | ಶ್ರೀ ರುದ್ರೇಶ ಎಸ್, ಕಲಬುರಗಿ | ಸದಸ್ಯರು |
| 6) | ಶ್ರೀ ಎನ್.ಬಿ. ಪಾಟೀಲ್, ಕಲಬುರಗಿ | ಸದಸ್ಯರು |
| 7) | ಶ್ರೀ ಯಶವಂತ ಹರಸೂರ್, ಕಲಬುರಗಿ | ಸದಸ್ಯರು |
| 8) | ಡಾ|| ನಾಗಾಬಾಯಿ ಬಿ ಬುಳ್ಳಾ, ಕಲಬುರಗಿ | ಸದಸ್ಯರು |

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ, ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಶೈಕ್ಷಣಿಕ ಅಭಿವೃದ್ಧಿಗಾಗಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧೀನದಲ್ಲಿ 8 ಜನಗಳನ್ನೊಳಗೊಂಡ **"ಶಿಕ್ಷಣ ತಜ್ಞರ ಸಮಿತಿಯನ್ನು"** ರಚಿಸಲು ಸರ್ಕಾರವು ಉದ್ದೇಶಿಸಿದ್ದು, ಅದರಂತೆ ಈ ಆದೇಶ.

**ಸರ್ಕಾರ ಆದೇಶ ಸಂಖ್ಯೆ:ಪಿಡಿಎಸ್ 168 ಹೆಚ್‌ಕೆಡಿ 2024**
**ಬೆಂಗಳೂರು ದಿನಾಂಕ: 07.02.2025**

ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಶೈಕ್ಷಣಿಕ ಅಭಿವೃದ್ಧಿಗಾಗಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧೀನದಲ್ಲಿ ಡಾ|| ಛಾಯಾ ದೇಗಾಂವಕರ ರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಶಿಕ್ಷಣ ತಜ್ಞರ ಸಮಿತಿಯನ್ನು ರಚಿಸಿ ಆದೇಶಿಸಿದೆ. ಈ ಸಮಿತಿಯು ಪ್ರತಿ ತಿಂಗಳು ಅಕ್ಷರ ಆವಿಷ್ಕಾರ ಯೋಜನೆ/ ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಭೆ ನಡೆಸಿ ಸೂಕ್ತ ಸಲಹೆ/ನಿರ್ದೇಶನಗಳನ್ನು ಮಂಡಳಿಗೆ ನೀಡತಕ್ಕದ್ದು.

| ಕ್ರ.ಸಂ | ತಜ್ಞರ ಹೆಸರು | ಹುದ್ದೆ |
|---|---|---|
| 1) | ಡಾ. ಛಾಯಾ ದೇಗಾಂವಕರ | ಅಧ್ಯಕ್ಷರು |
| 2) | ಡಾ. ಅಬ್ದುಲ್ ಕದೀರ್, ಬೀದರ್ | ಸದಸ್ಯರು |
| 3) | ಶ್ರೀ ಮಲ್ಲಿಕಾರ್ಜುನ್ ಎಂ.ಎಸ್ ಬೀದರ್ | ಸದಸ್ಯರು |
| 4) | ಶ್ರೀ ಫ್ರಾಂಸಿಸ್ ಬಾಷ್ಯಮ್ ,ಬಳ್ಳಾರಿ | ಸದಸ್ಯರು |
| 5) | ಶ್ರೀ ರುದ್ರೇಶ ಎಸ್, ಕಲಬುರಗಿ | ಸದಸ್ಯರು |
| 6) | ಶ್ರೀ ಎನ್.ಬಿ. ಪಾಟೀಲ್, ಕಲಬುರಗಿ | ಸದಸ್ಯರು |
| 7) | ಶ್ರೀ ಯಶವಂತ ಹರಸೂರ್, ಕಲಬುರಗಿ | ಸದಸ್ಯರು |
| 8) | ಡಾ|| ನಾಗಾಬಾಯಿ ಬಿ ಬುಳ್ಳಾ, ಕಲಬುರಗಿ | ಸದಸ್ಯರು |

ಈ ಆದೇಶವು ಸರ್ಕಾರವು ಆಯಾ ಸಂದರ್ಭದಲ್ಲಿ ಹೊರಡಿಸುವ ಆದೇಶ ಮತ್ತು ಸುತ್ತೋಲೆಗೆ ಒಳಪಟ್ಟಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಚಂದ್ರಶೇಖರಯ್ಯ)
ನಿರ್ದೇಶಕರು,
ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ
ಯೋಜನೆ,ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ.

**ಇವರಿಗೆ**

1. ಅಧ್ಯಕ್ಷರು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ
2. ಸರ್ಕಾರದ ಮುಖ್ಯ ಕಾರ್ಯದರ್ಶಿರವರು, ಕರ್ನಾಟಕ ಸರ್ಕಾರ.
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನ ಸೌಧ.
4. ಸರ್ಕಾರದ ಕಾರ್ಯದರ್ಶಿರವರು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರು, ಆರ್ಥಿಕ ಇಲಾಖೆ.
6. ಕಾರ್ಯದರ್ಶಿರವರು, ಕಲ್ಯಾಣ- ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ
7. ಘನತೆವೆತ್ತ ರಾಜ್ಯಪಾಲರ ವಿಶೇಷ ಕಾರ್ಯದರ್ಶಿರವರು, ರಾಜಭವನ,ಬೆಂಗಳೂರು
8. ಸಮಿತಿಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರಿಗೆ ಮಾಹಿತಿಗಾಗಿ(ಮಂಡಳಿಯ ಕಾರ್ಯದರ್ಶಿಯವರ ಮೂಲಕ)
9. ಮಾನ್ಯ ಯೋಜನಾ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
10. ಶಾಖಾಧಿಕಾರಿ, ಸ್ಕೀಮರ ಶಾಖೆ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ – ವಾರ್ಷಿಕ ಸಂಗ್ರಹಕ್ಕೋಸ್ಕರ
12. ಶಾಖಾರಕ್ಷಾ, ಕಡತ ಹೆಚ್ಚುವರಿ ಪ್ರತಿಗಳು.